ಶ್ರೀ ಅರಗ ಜ್ಞಾನೇಂದ್ರ : ಅವರು ಮೊದಲು ಚೆನ್ನಾಗಿ ರೈಸ್ ಮಾಡಿದರು, ಆಮೇಲೆ ನಿರ್ದಿಷ್ಟ ಪ್ರಕರಣಕ್ಕೆ ಸ್ಪಿಕ ಆನ್ ಆದರು

ಅಧ್ಯಕ್ಷರು : ಅರಗ ಜ್ಞಾನೇಂದ್ರರವರೆ ಕೇಳಿ, ಇನಸ್ಟಾಲಮೆಂಟನಲ್ಲಿ ಕಳುಹಿಸೋಣಪ್ಪ. ಈಗ ಜಗದೀಶ್ ಪಾಟೀಲರು, ಡಿ.ಆರ್. ಪಾಟೀಲರು, ಬಿ.ಎಸ್. ಪಾಟೀಲರು, ಶಿವರಾಮು, ಚಿಮ್ಮನ ಕಟ್ಟಿ, ರಾಜಶೇಖರ್ ಶೀಲವಂತ ಇವರೆಲ್ಲರೂ ಸೇರಿ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಹಣ ಬಿಡುಗಡೆಯಾಗದಿರುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗ ಈ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಎಲ್ಲರ ಪರವಾಗಿ ಒಬ್ಬರಿಗೆ ಅವಕಾಶ ಕೊಡುತ್ತೇನೆ, ಜಗದೀಶ್ ಪಾಟೀಲರು, ಒಂದು ನಿಮಿಷದಲ್ಲಿ ಮುಗಿಸಬೇಕು.

(ಓ) ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಹಣ ಬಿಡುಗಡೆ

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ (ಬೀಳಗಿ ಕ್ಷೇತ್ರ) : 1996-97ನೇ ಸಾಲಿನಲ್ಲಿ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಇಪ್ಪತ್ತೈದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರು. ಆದರೆ ಇಲ್ಲಿಯವರೆಗೆ ನಮಗೆ ತಿಳಿದ ಪ್ರಕಾರ ಐದು ಕೋಟಿಗಿಂತ ಹೆಚ್ಚಿನ ಹಣ ಬಿಡುಗಡೆಯಾಗಿಲ್ಲ. ಆದರೆ ಮಲೆನಾಡು ಬಿಡುಗಡೆ ಮಾಡಿರುವ ಸಂದರ್ಭದಲ್ಲಿ ಈ ಬಯಲು ಸೀಮೆ ಅಭಿವೃದ್ಧಿ ಮಂಡಲಿಗೆ ತಾರತಮ್ಯ ಮಾಡಿರುವುದನ್ನು ತಮ್ಮ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಚ್ಚಿಸುತ್ತೇನೆ, ಹಾಗೂ ಈ ವರ್ಷ ಇಪ್ಪತ್ತೈದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ತಾವು ಸಂಬಂಧಪಟ್ಟ ಮಂತ್ರಿಗಳು, ಒಂದೇ ನಿಮಿಷದಲ್ಲಿ ತಮ್ಮ ಉತ್ತರವನ್ನು ಹೇಳಿ ಮುಗಿಸಬೇಕು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಅಧ್ಯಕ್ಷರೆ, ಒಂದು ಪುಟದ ಹೇಳಿಕೆ ತಯಾರಿದೆ, ಅದನ್ನು ಓದುತ್ತೇನೆ.

ಅಧ್ಯಕ್ಷರು : ಬೇಡಿ, ಶೂನ್ಯ ವೇಳೆಯಲ್ಲಿ ನಮಗೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ.

ಶ್ರೀ ಪಿ.ಸಿ. ಸಿದ್ದನಗೌಡರ : ಹಣಕಾಸಿನದು ಆಗಿಲ್ಲ, ಅದಕ್ಕಾಗಿ ದಯಮಾಡಿ ಮುಖ್ಯಮಂತ್ರಿಗಳು ಹೇಳಿದರೆ ಒಳ್ಳೆಯದು.

ಅಧ್ಯಕ್ಷರು : ಓ, ಫಿಲಿಪ್ಸ್ ಕಂಪನಿಯವರು ಕೇಳುತ್ತಾರೆಯೇ?

ಶ್ರೀ ಪಿ.ಸಿ. ಸಿದ್ದನಗೌಡರ : ಮುಖ್ಯಮಂತ್ರಿಗಳನ್ನು ಕೇಳಿದರೆ ಹಣ ಕೊಡುತ್ತಾರೆ, ಇವರು ಹಣವನ್ನು ಕೊಡುವುದಿಲ್ಲ ಹಾಗೆಯೆ ಹೇಳಿಬಿಡುತ್ತಾರೆ.

ಅಧ್ಯಕ್ಷರು : ಫಿಲಿಪ್ಸ್ ಎಲ್ಲಾ ಇದರಲ್ಲೇ ಬರುತ್ತದೆಯೇ?

ಶ್ರೀ ಹೆಚ್.ಎನ್. ನಂಜೇಗೌಡ : ಫಿಲಿಪ್ಸ್ ಕಂಪನಿಯವರು ಕೇಳಿದ ಮೇಲೆ, ಬುಶ್ ಕಂಪನಿಯವರೇ ಉತ್ತರವನ್ನು ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಮೇಲೆ ಸೋನಿ ಕಂಪನಿಯವರಿಗೆಲ್ಲಾ ಸಿಟ್ಟು ಬರುತ್ತದೆ.

ಅಧ್ಯಕ್ಷರು : ರ್ಯಾಡೋ ಬೇರೆ ಇದೆ.

ಶ್ರೀ ವಾಟಾಳ್ ನಾಗರಾಜ್ : ಸರ್, ಈಗ ಫಿಲಿಪ್ಸ್ ಕಂಪನಿಯ ವಿಚಾರವನ್ನು ಹೇಳುತ್ತಿದ್ದಾರೆ, ತಾವು ಯಾರ ಕಂಪನಿಯವರು ಅಂತ?

ಶ್ರೀ ಸಿ. ಬೈರೇಗೌಡ : ಇಲ್ಲಿ ಯಾವ್ಯವೂ ಕಂಪನಿಗಳ ಹೆಸರುಗಳು ಬರುತ್ತಿದ್ದಾವೆ, ನನಗೆ ಏನು ಅರ್ಥವಾಗುತ್ತಿಲ್ಲ.

ಅಧ್ಯಕ್ಷರು: ಶಿವಶಂಕರಪ್ಪನವರು ನಿಮ್ಮ ಜೊತೆ ಏನೋ ಮಾತನಾಡುತ್ತಿದ್ದರು, ಸಿದ್ದನಗೌಡರು ಏನೊ ಮಾತನಾಡುವುದಕ್ಕೆ ಎದ್ದರು, ಆಗ ಫಿಲಿಪ್ಸದೆಲ್ಲಾ ಇದರಲ್ಲಿ ಬರುತ್ತದೆಂದು ಎಂದು ಹೇಳಿದೆ, ನಂಜೇಗೌಡರು ಅದಕ್ಕೆ ಉತ್ತರ ಬುಶ್ ಕಂಪನಿಯಿಂದಲೆ ಬರಬೇಕೆಂದು ಹೇಳಿದರು.

ಶ್ರೀ ಸಿ. ಬೈರೇಗೌಡರು : ಇಲ್ಲಿ ಏನು ನಡೆಯುತ್ತಿದೆ ಎಂದು ಅರ್ಥವಾಗುತ್ತಿಲ್ಲ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಫಿಲಿಪ್ಸ ಎಂದರೆ, ಪಂಚಾಚಾರರು ಎಂದು, ಸೋನಿ ಎಂದರೆ ಸಾದರು, ಬುಶ್ ಎಂದರೆ ಬಣಜಿಗರು.

ಅಧ್ಯಕ್ಷರು : ಕ್ಯಾಶಿಯೋ ಎಂದರೆ ಇವರು, ರ್ಯಾಡೊ ಎಂದರೆ ರೆಡ್ಡಿ, ಲಿಂಗಾಯಿತರು, ನಮ್ಮ ಎಂ.ಎಸ್.ಪಾಟೀಲ್, ರಾಯರೆಡ್ಡಿ ಇವರೆಲ್ಲಾ ಸೇರುತ್ತಾರೆ.

ಶ್ರೀ ಜೆ.ಹೆಚ್. ಪಟೇಲ : ಇನ್ನು ಯಾವ್ಯಾವುವು ಎಷ್ಟೆಷ್ಟು ದಕ್ಷವಾಗಿದ್ದಾವೆ ಎನ್ನುವುದನ್ನು ನೋಡಿ ಆಮೇಲೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಪಟ್ಟಿಯನ್ನು ನಾಳೆ ಸದನದ ಮುಂದೆ ಹೇಳಬೇಕು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಮೂರನೆ ಒಂದು ಭಾಗದಷ್ಟು ಪ್ರದೇಶ ಭೌಗೋಳಿಕವಾಗಿ ಈ ಬಯಲು ಸೀಮೆ ಮಂಡಳಿಯ ವ್ಯಾಪ್ತಿಗೆ ಬರುತ್ತಿದೆ. ಈ ಬಯಲು ಸೀಮೆ ಪ್ರದೇಶಾಭಿವೃದ್ಧಿಮಂಡಳಿಯನ್ನು ಸ್ಥಾಪನೆ ಮಾಡಬೇಕೆಂದು ಪ್ರತಿಪಾದನೆ ಮಾಡಿದವರಲ್ಲಿ ನಾನೂ ಕೂಡ ಒಬ್ಬ. ನನ್ನ ಕಾಲದಲ್ಲೇ ಈ ಕಾನೂನು ಆಗಿ ಕಾರ್ಯಗತ ಮಾಡುವ ಆ ಸುಯೋಗ ಕೂಡ ನನಗೆ ಒದಗಿ ಬಂದಿತ್ತು. ಇದಕ್ಕೆ ಎಷ್ಟು ಪ್ರಮಾಣದಲ್ಲ ವಾರ್ಷಿಕ ಆಯವ್ಯಯದಲ್ಲಿ ಹಣವನ್ನು ತೊಡಗಿಸಬೇಕಾಗಿತ್ತೋ, ಕಳೆದ ಎರಡು ವರ್ಷಗಳಿಂದ ಅಷ್ಟು ತೊಡಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ.

ಅದಕ್ಕೆ ನಮ್ಮ ರಾಜ್ಯದ ಹಣಕಾಸಿನ ಸ್ಥಿತಿ ಮುಗ್ಗಟ್ಟು ಕಾರಣ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ. ಶಿವರಾಮು : ಮುಖ್ಯಮಂತ್ರಿಗಳು ಈ ಕಡೆಗೆ ತಮ್ಮ ಗಮನವನ್ನು ಕೊಡಬೇಕು. ಏಕೆಂದರೆ ಇವರ ಗಮನ ಸೆಳೆಯುವುದಕ್ಕೆ ಈ ವಿಚಾರವನ್ನು ತಂದಿರತಕ್ಕಂಥದ್ದು.

ಶ್ರೀ ಸಿ. ಬೈರೇಗೌಡ : ನಾನು ಹೆಚ್ಚಿನ ಹಣಕಾಸನ್ನು ಈ ಮಂಡಳಿಗೆ ಹಣಕಾಸು ಇಲಾಖೆಯಿಂದ ಪಡೆಯಬೇಕೆನ್ನುವ ಪ್ರಯತ್ನವನ್ನು ಹಲವಾರು ಸಾರಿ ಮಾಡಿದ್ದೇನೆ. ಮಾನ್ಯ ದೇವೇಗೌಡರು ಇಲ್ಲಿ ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಈ ಮಂಡಳಿಯ ಎಲ್ಲಾ ಸದಸ್ಯರ ಒಂದು ಸಭೆ ಕರೆದು ಕನಿಷ್ಠ ಒಂದು ಕ್ಷೇತ್ರಕ್ಕೆ ಐವತ್ತು ಲಕ್ಷರೂಪಾಯಿಗಳಾದರೂ ಬರುವಂಥ ಒಂದು ವ್ಯವಸ್ಥೆಯನ್ನು ಮಾಡುತ್ತೇವೆನ್ನುವ ಭರವಸೆಯನ್ನು ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಕೂಡ ಕೊಟ್ಟಿದ್ದರು. ಅದು ಕಾರ್ಯಗತವಾಗುವುದರೊಳಗಾಗಿ, ಅವರು ಈ ದೇಶದ ಪ್ರಧಾನಮಂತ್ರಿಗಳಾದರು. ನಂತರ ಹಾಲಿ ಮುಖ್ಯಮಂತ್ರಿಗಳನ್ನು ಕೂಡ ಈ ಮಂಡಳಿಯ ಸದಸ್ಯರು ಭೇಟಿಯಾಗಿದ್ದು ಅಲ್ಲದೆ, ಹಾಲಿ ಮುಖ್ಯಮಂತ್ರಿಗಳನ್ನು ಈ ಮಂಡಳಿಯ ಸಭೆಗೆ ಬರಮಾಡಿಕೊಂಡು ಅವರ ಮುಂದೆಯು ಕೂಡ ಮಂಡಳಿಯ ಎಲ್ಲಾ ಸದಸ್ಯರು ಹೆಚ್ಚಿನ ಹಣದ ಬೇಡಿಕೆಯನ್ನು ಇಟ್ಟಿರುವುದು ಸಹ ನಿಜ. ನಾನು ಆಗಲೇ ತಿಳಿಸಿದಂತೆ, ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇದಕ್ಕೆ ಹಣವನ್ನು ಒದಗಿಸುವ ಒಂದು ಪ್ರಯತ್ನ ನಡೆಯುತ್ತದೆ, ವಿವರ ಈ ರೀತಿ ಇದೆ. ಏಕೆಂದರೆ, ಅನೇಕ ಮಾನ್ಯ ಸದಸ್ಯರಿಗೆ ಹಣ ಬಿಡುಗಡೆಯಾಗುತ್ತಿಲ್ಲ, ಕೆಲಸವಾಗುತ್ತಿಲ್ಲವೆನ್ನುವುದನ್ನು ಹೇಳುತ್ತಿದ್ದಾರೆ ಅದಕ್ಕೋಸ್ಕರ ಇದನ್ನು ಸ್ವಲ್ಪ ಸಭೆಯ ಗಮನಕ್ಕೆ ತರುವುದು ಸೂಕ್ತವೆಂದು ನಾನು ಭಾವಿಸಿದ್ದೇನೆ.

ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಸರ್ಕಾರಿ ಅಧಿಸೂಚನೆ ಸಂಖ್ಯೆ: ಲಾ 15 ಎಲಜಿಎನ 94, ದಿನಾಂಕ: 7-10-94 ರಲ್ಲಿ ರಚಿಸಿ ಸರ್ಕಾರಿ ಅಧಿಸೂಚನೆ ಸಂಖ್ಯೆ:ಕೈತೋಇ 176ಕೈಯೋಕಾ 93 (ಭಾಗ) ದಿನಾಂಕ: 4-1-95ರ ಮೇರೆಗೆ ದಿನಾಂಕ: 26-10-95 ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ. ಸದರಿ ಮಂಡಳಿಯು 1995-96ನೇ ಸಾಲಿನಿಂದ ಕಾರ್ಯಾರಂಭ ಮಾಡುತ್ತಿದೆ.

1995-96ನೇ ಸಾಲಿನಲ್ಲ ಮಂಡಳಿಗೆ ಒದಗಿಸಲಾದ ಅನುದಾನ ಹಾಗೂ 1996-97ನೇ ಸಾಲಿನಲ್ಲಿ ಮೀಸಲಿಡಲಾಗಿರುವ ಅನುದಾನದ ವಿವರಗಳನ್ನು ಕೆಳಗೆ ನೀಡಲಾಗಿದೆ.

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆ	1995-96ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನ	1996-97ನೇ ಸಾಲಿನಲ್ಲಿ ಮೀಸಲಾಗಿಡಲಾಗಿರುವ ಅನುದಾನ
(೧)	ಗಿರಿಜನ ಉಪ ಯೋಜನೆ (2402-00-796-0-02)	27.00	43.00
(2)	ವಿಶೇಷ ಘಟಕ ಯೋಜನೆ (2402-00-800-2-02)	70.00	173.00
(3)	ಬಯಲು ಭೂಮಿ ಅಭಿವೃದ್ಧಿ ಮಂಡಳಿ (2404-00-800-2-01)	275.00	431.00
	ಒಟ್ಟು	**372.00**	**647.00**

ವಿಶೇಷ ಘಟಕ ಯೋಜನೆಯಲ್ಲಿ 1996-97ನೇ ಸಾಲಿಗಾಗಿ ಮೀಸಲಾಗಿಡಲಾಗಿರುವ 173.00 ಲಕ್ಷ ರೂ.ಗಳನ್ನು ಕ್ರೋಢೀಕರಿಸುವ ಸಲುವಾಗಿ ಹಿಂದಕ್ಕೆ ಪಡೆಯಲಾಗಿದೆ. ಇದನ್ನು ಹೊರತುಪಡಿಸಿ ಉಳಿದ 474.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ ಮಧ್ಯೆ ಮಂಡಳಿಯು 1995-96ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದ್ದ ಅನುದಾನದ ಪೈಕಿ 280.55 ಲಕ್ಷ ರೂ.ಗಳನ್ನು ವಿವಿಧ ಕಾಮಗಾರಿಗಳಿಗಾಗಿ ಈಗಾಗಲೇ ಬಿಡುಗಡೆ ಮಾಡಿದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಕಾರ್ಯಗತ ಮಾಡುವ ಅಧಿಕಾರಿಗಳು ಯಾರಿದ್ದಾರೆ ಅವರಿಗೆ ಡಿಡಿ ಮೂಲಕ ಕೂಡ ಹಣವನ್ನು ಬಿಡುಗಡೆ ಮಾಡಲಾಗಿದೆ. ಇದಕ್ಕೆ ಹೆಚ್ಚಿನ ಹಣದ ಅವಶ್ಯಕತೆ ಇದೆ ಎನ್ನುವುದನ್ನು ನಾನೂ ಕೂಡ ಮನಗಂಡಿದ್ದೇನೆ, ಈ ನಿಟ್ಟಿನಲ್ಲಿ ಪ್ರಯತ್ನವನ್ನು ಕೂಡ ಮಾಡುತ್ತಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೈ. ರಾಮಕೃಷ್ಣ : ಮಂತ್ರಿಗಳೆ, ಅನೇಕಲ್ ತಾಲ್ಲೂಕು ಬಿಟ್ಟು ಹೋಗಿರುವುದಕ್ಕೆ ಕ್ಲರಿಕಲ್ ಎರರ್‌ನಿಂದ ಬಿಟ್ಟು ಹೋಗಿದೆ ಎಂದು ಹೇಳಿದಿರಿ. ಅಲ್ಲಿ ನದಿ ಇಲ್ಲ, ಕೆರೆಯಿಲ್ಲ, ನೀರಿನ ಆಶ್ರಯವಿಲ್ಲ, ಆ ತಾಲ್ಲೂಕನ್ನು ಪೂರ್ತಿ ಬಿಟ್ಟುಬಿಡುವುದಕ್ಕೆ ಏನು ಕಾರಣ, ಇದನ್ನು ಇವತ್ತು ಸೇರಿಸುತ್ತೀರಾ?

ಶ್ರೀ ಸಿ. ಬೈರೇಗೌಡ : ಅಧಿನಿಯಮದ ಪ್ರಕಾರ 31ಕ್ಕಿಂತ ಕಡಿಮೆ ಮಳೆ ಬೀಳತಕ್ಕಂಥ ಮತ್ತು ಮಳೆಯಾಗದ ಜಿಲ್ಲೆಗಳು ಯಾವುವು ಇವೆ ಅವುಗಳ ಆಧಾರದ ಮೇಲೆ ಸುಮಾರು 58 ತಾಲ್ಲೂಕುಗಳನ್ನು ಈ ಮಂಡಳಿಯ ವ್ಯಾಪ್ತಿಗೆ ಸೇರಿಸಲಾಗಿದೆ.

1.40 ಪಿ.ಎಂ.

ಇದಕ್ಕೆ ಒಂದು ವೈಜ್ಞಾನಿಕವಾದಂಥ ಆಧಾರ ಇದೆ. ಈ ಮಂಡಳಿಗೆ ಒಂದು ತಾಲ್ಲೂಕನ್ನು ಸೇರಿಸತಕ್ಕಂಥದ್ದು. ಅಥವಾ ಬಿಡತಕ್ಕಂಥದ್ದು ಮಾಡಬೇಕಾದರೆ, ಅಧಿನಿಯಮಕ್ಕೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ಒಂದು ವೈಜ್ಞಾನಿಕವಾದಂಥ ಆಧಾರದ ಮೇಲೆ ಈ ಮಂಡಲಿಗೆ ತಾಲ್ಲೂಕುಗಳನ್ನು ಸೇರಿಸತಕ್ಕಂಥ ನಿರ್ಧಾರ ಈ ಹಿಂದೆ ಆಗಿರುವಾಗ ಈ ಸಂದರ್ಭದಲ್ಲಿ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಲಕ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

(೫) ಬಿಜಾಪುರ ಜಿಲ್ಲೆಯಲ್ಲಿ ಗೌರವ ಶಿಕ್ಷಕರ ನೇಮಕಾತಿಯಲ್ಲಿ ತಪ್ಪು-ತಡೆ

ಶ್ರೀ ಶಿವಾನಂದ ಎಸ್. ಪಾಟೀಲ್ (ಟಿಕೋಟಾ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯಲ್ಲಿ ಗೌರವ ಶಿಕ್ಷಕರ ನೇಮಕಾತಿಯಲ್ಲಿ ಆದಂಥ ತಪ್ಪು ತಡೆಗಳ ಬಗ್ಗೆ ಸರ್ಕಾರದ ಗಮನ ಸೆಳೆದು ಇದಕ್ಕೆ ಒಂದು ಪರಿಹಾರವನ್ನು ಮಾನ್ಯ ಮುಖ್ಯಮಂತ್ರಿಗಳು ಒದಗಿಸಿಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇಡೀ ಜಿಲ್ಲೆಯ ಎಲ್ಲಾ ಶಾಸಕರುಗಳು ಕೂಡ ಇದನ್ನು ಒತ್ತಾಯ ಮಾಡಿದ್ದೇವೆ. ರಾಜ್ಯದಲ್ಲಿ ಮೊದಲು ಗೌರವ ಶಿಕ್ಷಕರಿಗೆ ಕೃಪಾಂಕ ಕೊಟ್ಟು, ಅವರನ್ನು ನೇಮಕಾತಿ ಮಾಡಿಕೊಳ್ಳಬೇಕೆಂದು ಹೇಳಿ ಆದೇಶ ಹೊರಡಿಸಲಾಗಿತ್ತು. ಬಿಜಾಪುರ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತನವರು ಸ್ವಲ್ಪ ತಪ್ಪು ಮಾಡಿರುವುದರಿಂದ, ಅದನ್ನು ಪುನಃ ನಾವು ಸರ್ಕಾರದ ಗಮನಕ್ಕೆ ತಂದು ಅದಕ್ಕೆ ತಿದ್ದುಪಡಿಯನ್ನು ಮಾಡಿಸಿ ಸರ್ಕಾರದಿಂದ ಒಂದು ಆದೇಶವನ್ನು ಹೊರಡಿಸಲಾಯಿತು. ಆ ಆದೇಶ ಬಂದ ನಂತರ 2-9-1996ಕ್ಕೆ ಗೆಜೆಟ್‌ನಲ್ಲಿ ಬಂದ ಮೇಲೆ 25-9-1996ಕ್ಕೆ ಸರ್ಕಾರ, 109 ಜನ ಗೌರವ ಶಿಕ್ಷಕರೆಂದು ಹೇಳಿ ನೇಮಕಾತಿಯ ತಾತ್ಕಾಲಿಕ ಪಟ್ಟಿಯನ್ನು ಅಲ್ಲಿನ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೊರಡಿಸಿದರು. ಇದಾದ ನಂತರ ಇನ್ನು ಸ್ವಲ್ಪ ದಿವಸದಲ್ಲಿಯೇ ಸರ್ಕಾರದ ಆದೇಶವನ್ನೇ ಕೊಡಬೇಕಾದಂಥ ಪರಿಸ್ಥಿತಿ ಇದ್ದಾಗ, ಅಲ್ಲಿ ಜಿಲ್ಲಾಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳ ವರ್ಗಾವಣೆ ಆದಮೇಲೆ, ಅಲ್ಲಿಯ ಜಿಲ್ಲಾಧಿಕಾರಿಗಳು ಇನಚಾರ್ಜ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳಾದಮೇಲೆ -101 ಶಿಕ್ಷಕರು ಯಾರು ಸಹ ಗೌರವ ಶಿಕ್ಷಕರು ಅಲ್ಲವೆಂದು ಹೇಳಿ ಆ ನೇಮಕಾತಿಯನ್ನು ಕ್ಯಾನ್ಸಲ ಮಾಡಿದರು. ಅದು ಆದ ನಂತರ ಪುನಃ ನಾವು ಎಲ್ಲ ಶಾಸಕರು ಬಂದು ಸರ್ಕಾರವನ್ನು ಕೇಳಿಕೊಂಡಾಗ, ಮಾನ್ಯ ಶಿಕ್ಷಣ ಸಚಿವರು ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ ಒಂದು ಪರಿಶೀಲನೆ ಟೀಂನ್ನು ಅಲ್ಲಿಗೆ ಕಳುಹಿಸಿಕೊಟ್ಟರು. ಪರಿಶೀಲನೆ ಟೀಂನವರು ಪರಿಶೀಲನೆ ಮಾಡಿದ ಮೇಲೆ ಏನು ಹೇಳಿದರೆಂದರೆ -ಜಿಲ್ಲಾಧಿಕಾರಿಗಳು ಮಾಡಿರುವುದು ತಪ್ಪಾಗಿದೆ, ಇದರಲ್ಲಿ ಕನಿಷ್ಟ 20ರಿಂದ 25 ಜನ ಗೌರವ ಶಿಕ್ಷಕರು ಇದ್ದಾರೆಂದು ತಿಳಿದುಕೊಂಡು ಅವರನ್ನು ನೇಮಕಾತಿ ಮಾಡಲಿಕ್ಕೆ ಆದೇಶವನ್ನು ಹೊರಡಿಸಿದ್ದಾರೆ. ಆದರೆ ಇವತ್ತು ಶಾಸಕರ ಸಮಸ್ಯೆ ಏನಾಗಿದೆಯೆಂದರೆ, ಅಲ್ಲಿ ಗೌರವ ಶಿಕ್ಷಕರೆಂದು ಸೇವೆ ಸಲ್ಲಿಸುತ್ತಿರುವವರು 1988ರಿಂದ ಕನಿಷ್ಟ 7 ರಿಂದ 10 ವರ್ಷಗಳ ಸೇವೆ ಸಲ್ಲಿಸಿದ್ದಾರೆ. ಈ ಗೌರವ ಶಿಕ್ಷಕರು ಪ್ರತಿಯೊಂದು ಭಾಗದಲ್ಲಿಯೂ ಇದ್ದಾರೆ. 101 ಜನ ಗೌರವ ಶಿಕ್ಷಕರು ಇದ್ದಾರೆಂದು ಹಿಂದಿನ ಮುಖ್ಯ ಕಾರ್ಯನಿರ್ವಹಣ ಅಧಿಕಾರಿಗಳು ಹೇಳಿದರು